969 (744) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ನವಣೂರು ತಾಲ್ಲೂಕಿನ 128 ಕಿ ಮೀ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲು ಮುಖ್ಯ ಇಂಜಿನಿಯರ್‌ರವರು ಆದೇಶ ಹೊರಡಿಸಲು ಕೋರಿದ್ದರೂ ಸಹ ಈವರೆಗೂ ಅನುಮತಿ ನೀಡದಿರಲು ಕಾರಣವೇನು,

ಆ) ಹಾಗಿದ್ದಲ್ಲಿ, ಡಾ ನಂಜುಂಡಪ್ಪನವರ ಪ್ರಾದೇಶಿಕ ಅಸಮತೋಲನ ವರದಿಯ ಆಧಾರದ ಮೇಲೆ ಈ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಸರಕಾರ ತೀವ್ರಗತಿಯಲ್ಲಿ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವಿದಾನಸಬಾ ಕ್ಷೇತ್ರವಾರು ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ

ಆ) ರಸ್ತೆಗಳನ್ನು ಮೇಲ್ದರ್ಜೆಗೇರಿಸಿದ ನಂತರ ಹಣ ಬಿಡುಗಡೆಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

970 (1258) ಶ್ರೀ ಸಿಂಧೂರ ಜಿ ರಾಜಶೇಖರ್ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಧಾರವಾಡ ಜಿಲ್ಲೆ ಹುಬ್ಬಳ್ಳಿ ನಗರದ ವಿದ್ಯಾನಗರದಿಂದ ಹಾಯ್ದು ಹೋಗುವ ಮೂನಾ ಬೆಂಗಳೂರು ರಸ್ತೆಯಿಂದ ಹೊಸೂರ ಉಣಕಲ್ ಕೂಡು ರಸ್ತೆಗೆ ಇರುವ ರಸ್ತೆಯ ಜಾಗದಲ್ಲಿ ಸುಮಾರು ವರ್ಷಗಳಿಂದ ಅನಧಿಕೃತವಾಗಿ ಗೋಡೆ ಹಾಗೂ ಕಟ್ಟಡಗಳನ್ನು ನಿರ್ಮಿಸಿ ಸಾರಿಗೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಅನಧಿಕೃತವಾಗಿ ಗೋಡೆ ಹಾಗೂ ಕಟ್ಟಡಗಳನ್ನು ನಿರ್ಮಿಸಿ ಸಾರಿಗೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದನ್ನು ತಪ್ಪಿಸಲು ಸಂಚಾರ ಸುಗಮಗೊಳಿಸಲು ಅನುಕೂಲ ಮಾಡಿಕೊಡಲಾಗುವುದೇ,

ಇ) ಅನಧಿಕೃತವಾಗಿ ಗೋಡೆ ಹಾಗೂ ಕಟ್ಟಡಗಳನ್ನು ನಿರ್ಮಿಸಿ ಸಾರಿಗೆ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಕೊಟ್ಟಿರುವವರ ಮೇಲೆ ಯೋಗ್ಯ ಕ್ರಮ ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು)

ಅ) ಬಂದಿದೆ

ಆ) ನದರಿ ರಸ್ತೆಯಲ್ಲಿಯ ಅನಧಿಕೃತ ಗೋಡೆ ಹಾಗೂ ಕಟ್ಟಡದ ಭಾಗಗಳನ್ನು ಆಪರೇಶನ್ ಘಟವಾತ್ ವೇಳೆಯಲ್ಲಿ ತೆಗೆದುಹಾಕಿ ಸಾರ್ವಜನಿಕರಿಗೆ ಹಾಗೂ ಸಾರಿಗೆ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ ಹಾಗೂ ಮಧ್ಯದಲ್ಲಿ ಮಿಡಿಯನ್ ಅಳವಡಿಸಿ ಸಾರಿಗೆ ಸಂಚಾರಕ್ಕೆ ಹೆಚ್ಚಿನ ಅನುಕೂಲ ಮಾಡಿಕೊಡಲಾಗಿದೆ

ಇ) ಕೆಎಂಸಿ ಕಾಯ್ದೆ 288(ಡಿ) ಪ್ರಕಾರ ಕ್ರಮ ಕೈಗೊಳ್ಳ-ಲಾಗಿರುವುದರಿಂದ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

971 (1260) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಕೇಂದ್ರ ಹಾಗೂ ರಾಜ್ಯ ಸರಕಾರ ಯಾವ ಯಾವ ಯೋಜನೆಗಳಿಗೆ ಹಣವನ್ನು ನೀಡುತ್ತದೆ,

ಆ) ಈಗಾಗಲೇ ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ, ಹಾಗೂ ಈಗ ಉಳಿದಿರುವ ಅನುದಾನ ಎಷ್ಟು,

ಇ) ಶಿಗ್ಗಾಂವ ಹಾಗೂ ಸವಣೂರ ಪಟ್ಟಣಗಳಲ್ಲಿರುವ ಕ್ರೀಡಾಂಗಣ ನಿವೇಶನಗಳು ಸಾರ್ವಜನಿಕರಿಂದ ಅತಿಕ್ರಮಣವಾದ ನಿವೇಶನಗಳನ್ನು ತೆರವುಗೊಳಿಸದಿರಲು ಕಾರಣಗಳೇನು,

ಈ) ಹಾಗಿದ್ದಲ್ಲಿ ಅತೀಕ್ರಮಣವನ್ನುಗೊಳಿಸಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ,

ಉ) ಶಿಗ್ಗಾಂವ-ಸವಣೂರು ತಾಲ್ಲೂಕುಗಳಲ್ಲಿ ದೈಹಿಕ ಶಿಕ್ಷಣ ಶಾಲೆ ಇಲ್ಲದೇ ಇರುವುದು ಸರ್ಕಾರದ ಗಮನದಲ್ಲಿದೆಯೇ,

ಊ) ಬಂದಿದ್ದಲ್ಲಿ, ದೈಹಿಕ ಶಿಕ್ಷಣ ಶಾಲೆಯನ್ನು ಸವಣೂರು ಪಟ್ಟಣದಲ್ಲಿ ಸ್ಥಾಪಿಸಲು ಸರ್ಕಾರ ಯೋಗ್ಯ ಕ್ರಮ ಯಾವಾಗ ಕೈಗೊಳ್ಳುತ್ತದೆ?